ಶ್ರೀ ಕೆ ಹನುಮಂತಯ್ಯ.—ಆ ಪ್ರತಿಫಲವನ್ನು ನಾವು ರೂಲ್ಸಿನಲ್ಲಿ ಎಷ್ಟರಮಟ್ಟಿಗೆ ದೊರೆಯಬೇಕೆಂದು ನಿರೀಕ್ಷಿಸಿಕೊಂಡಿರುತ್ತೇವೋ ಅಷ್ಟೂ ಸಿಕ್ಕುವುದಿಲ್ಲ. ಆದಕ್ಕಾಗಿಯೇ ನಾವು ಇನ್ನೂ ಹಿಂದೆಮುಂದೆ ನೋಡುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸಕ್ಕರೆಚಟ್ಟಣದಲ್ಲಿ ಜನಸಂಖ್ಯೆ ಎಷ್ಟಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಅದನ್ನು ಜನ ಸಂಖ್ಯೆಯಮೇರೆ ಕೊಡುವುದಕ್ಕಾಗುವುದಿಲ್ಲ ರೂಲ್ಸು ಪ್ರಕಾರ ಹೋಗಬೇಕಾಗಿದೆ. ಎಷ್ಟು ಪರ್ಸೆಂಟೇಜ್ ಆಫ್ ರಿಟರ್ನ್ಸ್ ಬರಬೇಕೋ ಅಷ್ಟು ಬರುವ ತಿದ್ದರೆ ನಾವು ಅದನ್ನು ಅಂಗೀಕರಿಸಬಹುದು. ಆದರೆ ಈಗ್ಗೆ ಈಗ ಇನ್ನೂ ಒಂದುಹೆಜ್ಜೆ ಮುಂದೆಹೋಗಿ ಮಲೆನಾಡಿಗೆ ಒಂದು ರಿಯಾಯಿತಿಯನ್ನು ತೋರಿಸಬೇಕೆಂಬ ಉದ್ದೇಶದಿಂದ ಆ ಪರ್ಸೆಂಟೇಜ್ ಆಫ್ ರಿಟರ್ನ್ಸ್ ಶೇಕಡ 5 ರಷ್ಟಾದರೂ ಬಂದರೆ ಸಾಕೆ ದು ಹೇಳಿ ಆ ರೀತಿ ಒಂದು ಆರ್ಡರನ್ನೇ ಪಾಸ್‌ಮಾಡಲಾಗಿದೆ. ಆದರೆ ಈ ಸಂದರ್ಭದಲ್ಲಿ ಅಷ್ಟೂನಹ ಬಾರದೆ ಇನ್ನೂ ಕಡಮೆ ಬರುತ್ತದೆಯಾದ್ದರಿಂದ ಯೋಚನೆ ಮಾಡುತ್ತಿದ್ದೇವೆ.

Supply of Electricity to Halepalya group of Hamlets in Tiptur Taluk

Q.—114. Sri T. G. THIMME GOWDA (Tiptur).—

Will the Government be pleased to state:—

(*a*) whether representations have been made on more than one occasion on the floor of this House regarding the immediate necessity to electrify Halepalya group of hamlets in Tiptur Taluk;

(*b*) whether they are aware that the hamlets are only a mile from the Tiptur Electric Sub-Station and that there are more than a thousand handlooms operating in the villages;

(*c*) whether they will undertake the work of supplying power to Halepalya group of hamlets immediately?

A.—Sri K. HANUMANTHAIYA (Chief Minister).—

(*a*) Yes. There have been representations.

(*b*) Yes. The hamlets are 1 mile and 3 furlongs from the Tiptur Sub-Station, and the village consists mostly of handloom industry. This has been taken note of in the preparation of the estimate for Load Survey, etc.

(*c*) An estimate for the electrification of Hosapalya and Halepalya for Rs. 60,000 is under the active consideration of Government. As soon as the estimate is sanctioned, arrangements will be made to take up the work.

ಶ್ರೀ ಟಿ. ಜಿ. ತಿಮ್ಮೇಗೌಡ.—ಹೀಗೆ ಎಷ್ಟು ವರ್ಷಗಳಿಂದ ಮನವಿಗಳು ಬರುತ್ತಿವೆ?

Sri K. HANUMANTHAIYA.—ಎಷ್ಟು ವರ್ಷಗಳಿಂದ ಬರುತ್ತಿವೆ ಎಂಬುದು ಗೊತ್ತಿಲ್ಲ. As soon as the estimate is sanctioned, arrangements will be made to take up the work. ಎಸ್ಟಿಮೇಟ್‌ಗಳು ಬಂದಿವೆ. ಮಂಜೂರು ಮಾಡೋಣ.

ಶ್ರೀ ಟಿ. ಜಿ. ತಿಮ್ಮೇಗೌಡ.—ಬೇಗ ಮಾಡಿಸಲು ಪ್ರಯತ್ನಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಮಾಡಿಸೋಣ.

ಶ್ರೀ ಬಿ. ಹುಚ್ಚೇಗೌಡ.—ಒಂದು ಮೈಲಿಗೆ 10 ಸಾವಿರದೊಳಗೇ ಖರ್ಚಾಗುತ್ತಿರವಾಗ ಇಲ್ಲಿ ತಾವು ಸೂಚಿಸಿರುವಂತೆ ಒಂದೂಕಾಲು ಮೈಲಿಗೆ 60 ಸಾವಿರ ರೂಪಾಯಿಗಳು ಹೇಗೆ ಖರ್ಚಾಗುತ್ತವೆ?

ಶ್ರೀ ಕೆ. ಹನುಮಂತಯ್ಯ.—ಎಸ್ಟಿಮೇಟ್ ಮಾಡಿಯೇ ಮಾಡಿದ್ದಾರೆ. ಆದರೆ ಆ ಡೀಟೈಲ್ಸ್ ನನ್ನಲ್ಲಿಲ್ಲ. There must be some reason.

ಶ್ರೀ ಬಿ. ಹುಚ್ಚೇಗೌಡ.—ತಿಪಟೂರಿನಿಂದ ಮುಂದೆ 6–7 ಮೈಲಿಗಳ ಫಾಸಲೆ ದೂರಹೋಗಿ ಅಲ್ಲಿರುವ ಜನಗಳಿಗೆ ಈ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿರುವಾಗ ತಿಪಟೂರಿಗೆ ಒಂದೇಒಂದು ಮೈಲಿ ದೂರದಲ್ಲಿರುವ ಈ ಸ್ಥಳಗಳಿಗೆ ತಾವೇಕ ಇನ್ನೂ ಒದಗಿಸಿರುವುದಿಲ್ಲ?

ಶ್ರೀ ಕೆ. ಹನುಮಂತಯ್ಯ.—'ಒದಗಿಸುವುದಿಲ್ಲ' ಎಂದು ಹೇಳಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಆ ಗ್ರಾಮದಲ್ಲಿ 700 ಜನ ಕೈಮಗ್ಗದವರಿದ್ದರೂ ಅಲ್ಲಿಗೆ ಕೊಡಬೇಡವೇ?

ಶ್ರೀ ಕೆ. ಹನುಮಂತಯ್ಯ.—ಯಾರೂ ಕೊಡುವುದಿಲ್ಲವೆಂದು ಹೇಳಿಲ್ಲ.

Sri B. HUTCHE GOWDA.—They have been denied this for the past ten years.

ಅಧ್ಯಕ್ಷರು.—ಕೊಡುತ್ತೇವೆಂದು ತಿಳಿಸಿದ್ದಾರಲ್ಲ; ಯಾವತ್ತೇನಾಗಬೇಕು?

Supply of power to irrigation pumps in Holalkere Taluk for the past two years.

Q.—118. Sri G. DUGGAPPA (Holalkere—Scheduled Castes).—

Will the Government be pleased to state:—

the number of instances of power supply to irrigation pumps in Holal-